**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಟಿ.ನರಸೀಪುರ**

ದಿನಾಂಕ 06 ನೇ ಫೆಬ್ರವರಿ 2026

**ಸಿ.ಸಿ. 1296/2024**

ಪಿರ್ಯಾದುದಾರರುಃ ರಾಜ್ಯದ ಪರ ಬನ್ನೂರು ಪೊಲೀಸರು

ವಿರುದ್ಧ

ಆರೋಪಿಃ ನಿಸಾರ್ ಬಿನ್ ಲೇಟ್ ಸೈದನ್, 45 ವರ್ಷ,
ವಾಸಃ ಉದಾಮಜೀದ್, ಮಜಿದಿ ರಸ್ತೆ,,
ಕಿರುಗಾವಲು ಟೌನ್, ಮಳವಳ್ಳಿ ತಾಲ್ಲೂಕು,
ಮಂಡ್ಯ ಜಿಲ್ಲೆ.

**ಆರೋಪಣೆ**

ಶ್ರೀ **ಸಚಿನ್ ಹೆಚ್.ಆರ್, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಟಿ.ನರಸೀಪುರ, ಆದ ನಾನು ಮೇಲ್ಕಂಡ ಆರೋಪಿಯಾದ ನಿಮ್ಮ ಮೇಲೆ ಕೆಳಕಂಡಂತೆ ಆರೋಪಣೆಯನ್ನು ಮಾಡುತ್ತೇನೆ.**

ದಿನಾಂಕ 23.02.2022 ರಂದು ಮಧ್ಯಾಹ್ನ 2.45 ಗಂಟೆಯ ಸಮಯದಲ್ಲಿ ಬನ್ನೂರು ಪೋಲಿಸ್ ಠಾಣಾ ಸರಹದ್ದಿಗೆ ಸೇರಿದ ಟಿ.ನರಸೀಪುರ–ಬನ್ನೂರು ಮುಖ್ಯ ರಸ್ತೆಯ ರಂಗನಾಥ ವೇಬ್ರಿಡ್ಜ್ ಮುಂಭಾಗದ ರಸ್ತೆಯಲ್ಲಿ ಬಾತ್ಮೀದಾರರ ಮಾಹಿತಿಯಂತೆ ಕಾಯುತ್ತಿದ್ದಾಗ ಟಿ.ನರಸೀಪುರ ಕಡೆಯಿಂದ ಸಂತೆಮಾಳದ ಸರ್ಕಲ್ ಕಡೆಗೆ ಆರೋಪಿಯಾದ ನೀವು ನಿಮ್ಮ ಬಾಬ್ತು ಗೂಡ್ಸ್ ಅಪೇ ಆಟೋ ಸಂಖ್ಯೆ ಕೆಎ–11–8791 ದಲ್ಲಿ ಇದ್ದ ಒಟ್ಟು 17 ಪ್ಲಾಸ್ಟಿಕ್ ಚೀಲಗಳ ಒಟ್ಟು 890 ಕೆಜಿ ಸರ್ಕಾರದಿಂದ ನೀಡುವ ಪಡಿತರ ಅಕ್ಕಿಯನ್ನು ಅಕ್ರಮ ಸಾಗಾಣಿಕೆ ಮಾಡಿದ್ದು, ಬಡವರಿಗೆ ನೀಡುವ ಪಡಿತರ ಪದಾರ್ಥಗಳನ್ನು ಕಾಳ ಸಂತೆಯಲ್ಲಿ ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ಯಾವುದೇ ಪರವಾನಗಿ ಇಲ್ಲದೆ ಸಂಗ್ರಹಿಸಿ ಮತ್ತು ಸಾಗಾಣಿಕೆ ಮಾಡಿದ್ದು, ಆ ಮೂಲಕ ಕಲಂ 7 ರ Essential Commodities Act 1982 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

(**ಮೇಲ್ಕಂಡ ಆರೋಪಗಳ ಬಗ್ಗೆ ಆರೋಪಿಯಾದ ನೀವು ಈ ಮಾನ್ಯ ನ್ಯಾಯಾಲಯದಲ್ಲಿ ವಿಚಾರಣೆಗೊಳಪಡತಕ್ಕದ್ದು ಎಂದು ನಾನು ನಿರ್ದೇಶಿಸುತ್ತೇನೆ.**)

**(ಸಚಿನ್ ಹೆಚ್.ಆರ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಟಿ.ನರಸೀಪುರ.**

## **ಆರೋಪಿಯ ಹೇಳಿಕೆ**

ಪ್ರಶ್ನೆ-1 ಈಗ ಓದಿ ಹೇಳಿದ ಆರೋಪಣೆಯನ್ನು ಅರ್ಥ ಮಾಡಿಕೊಂಡಿರಾ ?

ಉತ್ತರಃ

ಪ್ರಶ್ನೆ-2 ಮೇಲೆ ಹೇಳಿದ ಆರೋಪಣೆಯನ್ನು ಒಪ್ಪಿಕೊಳ್ಳುವಿರಾ ? ಅಥವಾ ವಿಚಾರಣೆ ಆಗಬೇಕೆನ್ನುವಿರಾ?
ಉತ್ತರಃ

**(ಮೇಲ್ಕಂಡ ಆರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬರೆದು ಕೊಂಡಿದ್ದು ಅವು ಸರಿಯಾಗಿರುತ್ತದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.)**

**(ಸಚಿನ್ ಹೆಚ್.ಆರ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ , ಟಿ.ನರಸೀಪುರ.**

**ಆರೋಪಿ ಸಹಿಃ**